ಕ್ಲೀನ್ ಮಾಡುತ್ತಿದ್ದಳು. ಇದರಿಂದಾಗಿ ಅಂಗನವಾಡಿ ಮೇಡಂ ಸರೋಜಮ್ಮ ಬಂದವರ ಹತ್ತಿರವೆಲ್ಲಾ, ''ನಮ್ಮಕ್ಕಯ್ಯಮ್ಮ ಬಲೊಳ್ಳೇಳು, ಅಂಗನವಾಡಿ ಮಕ್ಕುಳ್ನ ಸ್ವಂತ ಮಕ್ಳಿಗಿಂತ್ಲೂ ಹೆಚ್ಚಾಗಿ ನೋಡ್ಕೊತಾಳೆ. ಗೌರ್ಮೆಂಟೆನಾದ್ರೂ ಹೆಲ್ಪರ್ ಕೆಲ್ಸಾನ ಪರ್ಮನೆಂಟ್ ಮಾಡಿದ್ರೆ ನಾನಂತೂ ಅಕ್ಕಯ್ಯಮ್ಮನ ಹೆಸ್ರುನೇ ಶಿಫಾರಸ್ಸು ಮಾಡ್ತೀನಿ.'' ಎಂದು ಕೊಂಡಾಡುತ್ತಿದ್ದಳು.

ಹೀಗೆ ಅಕ್ಕಯ್ಯಮ್ಮನ ಬದುಕು ಸರಾಗವಾಗಿ ನಡೆಯುತ್ತಿತ್ತು. ಅಕ್ಕಯ್ಯಮ್ಮ ಒಬ್ಬಂಟಿಯಾಗಿದ್ದರೂ ಊರಿನ ಸಕಲ ಗಂಡು ಜೀವಿಗಳಲ್ಲಿ ಪ್ರತಿಯೊಂದು ಗಂಡು ಪ್ರಾಣಿಯೂ ಆಕೆಯನ್ನು ಸಹೋದರಿಯಂತೆ ಪರಿಭಾವಿಸುತ್ತಿದ್ದವಲ್ಲದೆ ಕಾಮದೃಷ್ಟಿಯಿಂದ ಎಂದೂ ಕಂಡವರಲ್ಲ. ಅಕ್ಕಯ್ಯಮ್ಮನದು ಪೀಚಲು ದೇಹ. ಜೊತೆಗೆ, ಬಲಗಣ್ಣು ಮೆಳ್ಳೆಗಣ್ಣಾಗಿತ್ತು. ಗೇಣುದ್ದ ಇರುತ್ತಿದ್ದ ತಲೆಕೂದಲು ಒಣಗಿದ ಗರಿಕೆಯಂತೆ ಒಂದಿಷ್ಟು ಗಾಳಿ ಬೀಸಿದರೂ ಸಾಕು ಎತ್ತಂದರತ್ತ ವಾಲಿಕೊಳ್ಳುತ್ತಿದ್ದವು. ಅಕ್ಕಯ್ಯಮ್ಮ ಆಗಾಗ ಎರಡೂ ಕೈಗಳಿಂದ ಕೂದಲನ್ನು ಹಿಂದಕ್ಕೆಳೆದುಕೊಂಡು ರಬ್ಬರ್ ಬ್ಯಾಂಡಿನಿಂದ ಬಿಗಿದುಕೊಳ್ಳುತ್ತಿದ್ದಳಲ್ಲದೆ ಎರಡೂ ಕಡೆಗೂ ಎರಡೆರಡು ಹೇರ್ ಪಿನ್‌ಗಳನ್ನು ಸಿಗಿಸಿಕೊಳ್ಳುತ್ತಿದ್ದಳು. ಮೆಳ್ಳೆಗಣ್ಣಾಗಿದ್ದರಿಂದ ಅಕ್ಕಯ್ಯಮ್ಮ ಯಾರೊಂದಿಗೋ ನೋಡಿಕೊಂಡು ಇನ್ಯಾರೊಂದಿಗೋ ಮಾತನಾಡುತ್ತಿರುವಂತೆ ಕಾಣುತ್ತಿತ್ತು. ಊರಿನಲ್ಲಿ ಇಂಗ್ಲಿಷ್ ಕಲಿತ ಹುಡುಗರು ಅಕ್ಕಯ್ಯಮ್ಮನನ್ನು ನೋಡಿದಾಗ 'ಲುಕಿಂಗ್ ಟು ಲಂಡನ್ ಟಾಕಿಂಗ್ ಟು ಟೋಕಿಯೊ' ಎಂದು ರೇಗಿಸುತ್ತಿದ್ದರು. ಅದು ಅಕ್ಕಯ್ಯಮ್ಮನಿಗೇನಾದರೂ ಕಿವಿಗೆ ಬಿದ್ದರೆ, ''ಸುಮ್ಕಿರ್ರಪ್ಪ ಸಾಕು ನಿಮ್ಮಿಂಗ್ಲೀಷ್ನ ಕಂಡಿದ್ದೀನಿ. ಇಂಥ ಇಂಗ್ಲೀಷ್ ಬರೋರು ಬೆಂಗ್ಳೂರ್ಗೋ, ತುಮ್ಕೂರ್ಗೋ ಹೋಗಿ ಕೆಲ್ಸ ನೋಡ್ಕಂಬ್ದೆ ಹಳ್ಳೀಲೆ ಬಿದ್ದಿದ್ದೀರಿ.'' ಎಂದು ನೈಸಾಗೆ ಗ್ರಹಚಾರ ಬಿಡಿಸುತ್ತಿದ್ದಳು. ಹಿರಿಯರು ಕೆಲವರು 'ಅಕ್ಕಯ್ಯಮ್ಮನಿಗೆ ಎಡಗಣ್ಣೇನಾದರೂ ಮೆಳ್ಳೆಗಣ್ಣಾಗಿದ್ದಿದ್ರೆ ರಾಣಿ ಥರ ಮೆರೆದಿರೋಳು. ಯಾವೊನಾದ್ರೂ ಗೌರ್ಮೆಂಟ್ ನೌಕರಿಲಿರೋನು ಮದುವೆ ಮಾಡ್ಕೊಂಡೋಗಿರೋನು. ಬಲಗಣ್ಣು ಆಗಿರೋದ್ರಿಂದ ಇಂಥ ಗಂಜರಗೋಳಿಗೆ ಸಿಗಾಕ್ಕೊಂಡವ್ಳೆ.' ಎಂದು ಭವಿಷ್ಯ ಹೇಳುವ ಪ್ರಕಾಂಡ ಪಂಡಿತರಂತೆ ಕನಿಕರ ವ್ಯಕ್ತಪಡಿಸುತ್ತಿದ್ದರು.



ಇಂಥ ಅಕ್ಕಯ್ಯಮ್ಮನಿಗೆ ಇವೊತ್ತು ತುಂಬಾನೇ ಬೇಸರವಾಗಲು ಕಾರಣವೊಂದಿತ್ತು. ಮಧ್ಯಾಹ್ನ ಅಂಗನವಾಡಿಯಲ್ಲಿ ಕೆಲಸ ಮುಗಿಸಿ ಹೊರಡುವಾಗ ಮೇಡಂ ಸರೋಜಮ್ಮನವರು, ''ಎಂಥ ಯಡವಟ್ ಕೆಲ್ಸ ಆಯ್ತು ನೋಡು ಅಕ್ಕಯ್ಯಮ್ಮ. ನಿನ್ನ ಜಾಗಕ್ಕೆ ಗೌರ್ಮೆಂಟ್ನೋರು ಹನುಮಂತಪುರದ ಸಾಕಮ್ಮನ್ನ ಪರ್ಮನೆಂಟ್ ಮಾಡಿ ಹಾಕೆವ್ರೆ. ಗೌರ್ಮೆಂಟ್ ರಿಸರ್ವೇಶನ್ ಪ್ರಕಾರ ನಿನ್ನ ಈ ಕೆಲಸದಲ್ಲಿ ಪರ್ಮನೆಂಟ್ ಮಾಡೋಕಾಗಲ್ವಂತೆ. ಇವೊತ್ತು ತಾಲ್ಲೂಕು ಆಫೀಸಿನಿಂದ ಆರ್ಡರ್ ಬಂದೈತೆ. ಸಾಕಮ್ಮ ನಾಳೆ ಬಂದು ಡ್ಯೂಟಿಗೆ ರಿಪೋರ್ಟ್ ಮಾಡ್ಕಂಬ್ತಾಳಂತೆ. ನಿನ್ನ ಹಿಂದಿನ ತಿಂಗಳ ಸಂಬಳಾನ ನಾಳೆ ಬಂದು ಇಸ್ಕಂಡೋಗು. ಬೇಜಾರೇನು ಮಾಡ್ಕೊಬೇಡ. ಇವರು ಕೊಡೊ ಸಂಬಳದ ನಾಲ್ಕರಷ್ಟು ನೀನು ಕೂಲಿನಾಲಿಗೋದ್ರೆ ಸಂಪಾದ್ನೆ ಮಾಡಬಹುದು.'' ಎಂದು ಸಮಾಧಾನದ ಮಾತುಗಳನ್ನಾಡಿದ್ದರು. ಅಕ್ಕಯ್ಯಮ್ಮನಿಗೆ ಒಂದು ಕ್ಷಣ ಮನಸ್ಸು ಪಿಚ್ಚೆನಿಸಿದರೂ 'ಅಯ್ಯೋ ಈ ಜಗತ್ತಿನಾಗೆ ಯಾವ್ದೇನು ಶಾಶ್ವತ ತಗೊ' ಎಂದು ತನ್ನಷ್ಟಕ್ಕೆ ತಾನೇ ಸಮಾಧಾನ ಪಟ್ಟುಕೊಂಡಿದ್ದಳು. ಅಕ್ಕಯ್ಯಮ್ಮನನ್ನು ಅಂಗನವಾಡಿಯಿಂದ ತೆಗೆದ ಸುದ್ದಿ ಅಂದು ಮಧ್ಯಾಹ್ನವೇ ಊರಾದ ಊರನ್ನು ಹಸಿಕಟ್ಟಿಗೆಯನ್ನು ಒಲೆಗೆ ಇಟ್ಟಾಗ ಹರಡುವ ಹೊಗೆಯಂತೆ ಸುತ್ತಿಕೊಂಡಿತ್ತು. ''ಏನ್ ಅಕ್ಕಯ್ಯಮ್ಮ ಅಂಗನವಾಡಿ ಕೆಲಸದಿಂದ ವಜಾ ಮಾಡಿದ್ರಂತೆ.'' ''ಪಾಪ,